ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:-ಗಂಗಾ ಕಲ್ಯಾಣ ಯೋಜನೆಯಡಿ ಏತ ನೀರಾವರಿ ಯೋಜನೆಗಳ ಘಟಕ ವೆಚ್ಚ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:1) ಸರ್ಕಾರದ ಆದೇಶ ಸಂಖ್ಯೆ:ಸಕಇ 112 ಎಸ್‌ಡಿಸಿ 2012,ದಿ:17-06-2013..
2) ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಅಂಅನಿ:ಏನಿಯೋ/ಘ.ವೆ.ಪ/18/2014-15: 12029,,ದಿನಾಂಕ:28-11-2014

-o-

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1) ರ ಆದೇಶದಲ್ಲಿ ಡಾ:ಬಿ.ಅರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಸಾಮೂಹಿಕ ಕೊಳವೆ ಬಾವಿ ಕಾರ್ಯಕ್ರಮದ ಘಟಕ ವೆಚ್ಚವನ್ನು ಪರಿಷ್ಕರಿಸಿ, 2 ಕೊಳವೆ ಬಾವಿಗಳ 8 ಎಕರೆಯವರೆಗಿನ ಘಟಕಕ್ಕೆ ರೂ. 2.53 ಲಕ್ಷದಿಂದ ರೂ. 4.00 ಲಕ್ಷಗಳಿಗೆ ಹಾಗೂ 3 ಕೊಳವೆಬಾವಿಗಳ 15 ಎಕರೆಯವರೆಗಿನ ಘಟಕಕ್ಕೆ ರೂ. 3.59 ಲಕ್ಷದಿಂದ ರೂ. 6.00 ಲಕ್ಷಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರು ಸಾಮೂಹಿಕ ನೀರಾವರಿ ಯೋಜನೆಯ ಘಟಕವೆಚ್ಚಗಳಂತೆ ನಿಗಮದಲ್ಲಿ ಸಣ್ಣ ಅತೀ ಸಣ್ಣ ರೈತರಿಗೆ ನೆಲಮಟ್ಟದಲ್ಲಿ ದೊರೆಯುವ ನೀರನ್ನು ಏತ ನೀರಾವರಿ ಕಾಮಗಾರಿಯ ಮೂಲಕ ಪೈಪುಗಳನ್ನು ಅಳವಡಿಸಿ, ಪಂಪ್‌ಸೆಟ್ ಅಳವಡಿಸಿ ವಿದ್ಯುದೀಕರಣಗೊಳಸಲು 8 ಎಕರೆ ವರೆಗೆ ರೂ. 2.53 ಲಕ್ಷಗಳು ಹಾಗೂ 15 ಎಕರೆ ವರೆಗೆ ಘಟಕ ವೆಚ್ಚ ರೂ. 3.59 ಲಕ್ಷಗಳಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಏತ ನೀರಾವರಿ ಘಟಕ ವೆಚ್ಚ ಪರಿಷ್ಕರಿಸಿರುವುದಿಲ್ಲ. ದಿನಾಂಕ: 26-09-2014 ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ 1996-97 ನೇ ಸಾಲಿನಲ್ಲಿ ಏತ ನೀರಾವರಿಯ ಘಟಕ ವೆಚ್ಚವನ್ನು ಪರಿಷ್ಕರಿಸಿದ್ದು, ಯಂತ್ರೋಪಕರಣ ಸಾಮಗ್ರಿಗಳು ಮತ್ತು ಕೂಲಿ ದರಗಳು ಹೆಚ್ಚಾಗಿರುವುದರಿಂದ ಏತ ನೀರಾವರಿ ಘಟಕವೆಚ್ಚವನ್ನು ಪರಿಷ್ಕರಿಸಲು ಹಾಗೂ ಎಲ್ಲಾ ಉಪಜಾತಿಗಳಿಗೆ ಅವರ ಪ್ರಸ್ತಾವನೆಗಳ ಅನುಪಾತದಲ್ಲಿ ಸಮನಾಗಿ ಹಂಚಲು ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿಗಳ ಗಮನಕ್ಕೆ ಕಡ್ಡಾಯವಾಗಿ ತರುವ ಬಗ್ಗೆ ಚರ್ಚಿಸಿ ಕನಿಷ್ಠ 3 ಫಲಾಪೇಕ್ಷಿಗಳ, ಕನಿಷ್ಠ 8 ಎಕರೆಯವರೆಗಿನ ಏತ ನೀರಾವರಿ ಯೋಜನೆಯ ಘಟಕವೆಚ್ಚವನ್ನು ರೂ. 2.53 ಲಕ್ಷಗಳಿಂದ ರೂ. 4.00 ಲಕ್ಷಗಳಿಗೆ, 4ಕ್ಕಿಂತ ಹೆಚ್ಚು ಫಲಾಪೇಕ್ಷಿಗಳ 15 ಎಕರೆಯವರೆಗಿನ ಏತ ನೀರಾವರಿಯ ಯೋಜನೆಯ ಘಟಕ ವೆಚ್ಚವನ್ನು ರೂ. 3.59 ಲಕ್ಷಗಳಿಂದ ರೂ. 6.00 ಲಕ್ಷಗಳಿಗೆ ಹಚ್ಚಿಸಲು ನಿರ್ಣಯಿಸಿ, ಸಾಮೂಹಿಕ ಕೊಳವೆ ಬಾವಿ ಯೋಜನೆಯ ಘಟಕ ವೆಚ್ಚವನ್ನು ಪರಿಷ್ಕರಿಸಿದಂತೆ ಏತ ನೀರಾವತಿ ಯೋಜನೆಯ ಘಟಕ ವೆಚ್ಚವನ್ನು ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 352 ಎಸ್‌ಡಿಸಿ 2014,
ಬೆಂಗಳೂರು, ದಿನಾಂಕ: 28/ 02/2015.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಏತ ನೀರಾವರಿ ಯೋಜನೆಗಳ ಘಟಕವಚ್ಚವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿಸಲಾಗಿದೆ.

1. ಕನಿಷ್ಠ 3 ಫಲಾಪೇಕ್ಷಿಗಳ ಕನಿಷ್ಠ 8 ಎಕರೆಯವರೆಗಿನ ಏತ ನೀರಾವರಿ ಯೋಜನೆಯ ಘಟಕ ವೆಚ್ಚವನ್ನು ರೂ. 2.53 ಲಕ್ಷಗಳಿಂದ ರೂ. 4.00 ಲಕ್ಷಗಳಿಗೆ ಹೆಚ್ಚಿಸಿದೆ.

28/2/15
AEE/AE/FDA

2. 4 ಕ್ಕಿಂತ ಹೆಚ್ಚು ಫಲಾಪೇಕ್ಷಿಗಳ 15 ಎಕರೆಯವರೆಗಿನ ಏತ ನೀರಾವರಿ ಯೋಜನೆಯ ಘಟಕ ವೆಚ್ಚವನ್ನು ರೂ. 3.59 ಲಕ್ಷಗಳಿಂದ ರೂ.6.00 ಲಕ್ಷಗಳಿಗೆ ಹೆಚ್ಚಿಸಿದೆ.

ಈ ಪರಿಷ್ಕರಣೆಯಿಂದ ಉಂಟಾಗಲಿರುವ ವೆಚ್ಚವನ್ನು ನಿಗಮದ ಲಭ್ಯ ಸಂಪನ್ಮೂಲಗಳ ಮಿತಿಯಲ್ಲಿಯೇ ಭರಿಸಿ ಯೋಜನೆಯನ್ನು ಅನುಷ್ಠಾನಗೊಳಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1023 ವೆಚ್ಚ-3/2014, ದಿನಾಂಕ:16-02-2015 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

28/02
(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಬೆಂಗಳೂರು -ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಿದ 200 ಪ್ರತಿಗಳನ್ನು ಅಧೀನ ಕಾರ್ಯದರ್ಶಿ-3, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

ಪ್ರತಿ:-

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ,ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
6. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ
8. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 ಮತ್ತು 9) ಆರ್ಥಿಕ ಇಲಾಖೆ, ವಿಧಾನ ಸೌಧ,
10. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ,
11. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ,
12. ಸರ್ಕಾರದ ಉಪ ಕಾರ್ಯದರ್ಶಿ-1&2, ಸಮಾಜ ಕಲ್ಯಾಣ ಇಲಾಖೆ,ವಿಕಾಸ ಸೌಧ.
13. ಸರ್ಕಾದ ಅಧೀನಕಾರ್ಯದರ್ಶಿ-1 ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.